ಓ.ಎಸ್. – 250/2016

ಪಿ. ಡಬ್ಲೂ – 2

ಸಾಕ್ಷಿಯನ್ನು ದಿಃ 19.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಸ.ಸ. ವಕೀಲರಿಂದಃ–

1. ನಿಪಿ18 ರಿಂದ 41 ರ ದಾಖಲೆಗಳಿಗೆ ಈ ದಾವೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಕ್ರಮವಾಗಿ ದಾವೆಯಲ್ಲಿ ಕೋರಿರುವ ಪರಿಹಾರಗಳನ್ನು ಪಡೆಯಲು ನಿಪಿ 18 ರಿಂದ 41 ದಾಖಲೆಗಳನ್ನು ಹುಟಾರು ಮಾಡಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ.ಎಲ್ ಬಿ ವಕೀಲರಿಂದಃ–

1. 2016 ರಲ್ಲಿ ಈ ದಾವೆ ದಾಖಲು ಮಾಡಿದ್ದು 2020–2021 ರಲ್ಲಿ ದಾವಾ ಸ್ವತ್ತು ಪೋಡಿ ದುರಸ್ಥಿಯಾಗಿದೆ. ಪೋಡಿ ದುರಸ್ಥಿನ ನಂತರ ದಾವಾ ಸ್ವತ್ತಿನ ಸರ್ವೇ ನಂಬರ್ 74 ಎಂದು ಬದಲಾಗಿದೆ. ಪೋಡಿ ದುರಸ್ಥಿ ನಂತರ ವಾದ ಪತ್ರದ ಶೆಡ್ಯೂಲ್ ಅನ್ನು ನಾವು ತಿದ್ದುಪಡಿ ಮಾಡಿಲ್ಲ ಎಂದರೆ ಸರಿ. ಪೋಡಿ ದುರಸ್ಥಿ ಯಲ್ಲಿ ನಮ್ಮ ಸ್ವತ್ತಿನ ಗುರುತಿನ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ 18 ನಮ್ಮ ವಾಸದ ಮನೆಗೆ ಸಂಬಂಧಪಟ್ಟ ಬಿಲ್ಲು. ನಿಪಿ 24 ರಿಂದ 40 ನಾವು ಹಾಕಿರುವ ಶೆಡ್ ಗೆ ಸಂಬಂಧಪಟ್ಟ ಪೋಟೋಗಳೆಂದರೆ ಸರಿಯಲ್ಲ, ಅವುಗಳಲ್ಲಿ ಮನೆಯ ಪೋಟೋ ಸಹ ಇದೆ ಎಂದು ನುಡಿಯುತ್ತಾರೆ. ನಿಪಿ 24 ರಲ್ಲಿ ವಿದ್ಯುತ್ ಮೀಟರ್ ಕಾಣುವುದಿಲ್ಲ ಎಂದರೆ ಸರಿ. ಮುಂದುವರೆದು ನಿಪಿ 25 ರಲ್ಲಿ ಮೀಟರ್ ಇದೆ ಎಂದು ನುಡಿಯುತ್ತಾರೆ. ನಿಪಿ 24 ರಲ್ಲಿ ಕಾಣುವ ಮನೆಯನ್ನು ಹೊರತುಪಡಿಸಿ ಯಡೇಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಮ್ಮ ಮನೆ ಸಹ ಇದೆ. ನಿಪಿ 24 ರಲ್ಲಿ ನ ಮನೆಯಲ್ಲಿ ನಾವು ವಾಸವಾಗಿದ್ದೇವೆ.

2. ದಾವಾ ಸ್ವತ್ತಿನಲ್ಲಿ 2 ಶೆಡ್ ಗಳು ಇರುವ ಬಗ್ಗೆ ಪೋಟೋ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ 24 ಮತ್ತು 25 ರಲ್ಲಿ ಕಾಣುವ ಶೆಡ್ ಗಳ ನಡುವೆ ಸುಮಾರು 200 ಅಡಿ ಅಂತರವಿದೆ. ವಿದ್ಯುತ್ ಮೀಟರ್ ಇರುವ ಶೆಡ್ ನ ಬಾಗಿಲಿಗೆ ಸಂಬಂಧಪಟ್ಟಂತೆ ಪೋಟೋ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಯಾವುದೇ ಪೋಟೋಗಳಲ್ಲಿ ಅಕ್ಷಾಂಶ ಮತ್ತು ರೇಖಾಂಶವನ್ನು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತಿನ ಮಂಜೂರಾತಿ, ಪೋಡಿ ದುರಸ್ಥಿ ಪೂರ್ವದಲ್ಲಿ ಅರಣ್ಯ ಇಲಾಖೆಯಿಂದ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಅನುಮತಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ.

ರೆವಿನ್ಯೂ ನಕ್ಷೆಯನ್ನು ನಿಪಿ 3 ರಂತೆ ತಯಾರಿಸಿ ನಂತರ ನಮಗೆ ದಾವಾ ಸ್ವತ್ತನ್ನು ಮಂಜೂರು ಮಾಡಿದ್ದಾರೆ ಎಂದರೆ ಸರಿ. ನಿಪಿ 3 ರಲ್ಲಿ ದಾವಾ ಸ್ವತ್ತನ್ನು ನಿಖರವಾಗಿ ಗುರುತಿಸಿಲ್ಲ ಎಂದರೆ ಸರಿಯಲ್ಲ. ನಾವು ಈಗ ಸುಮಾರು 8.5 ಎಕರೆ ಜಾಗದಲ್ಲಿ ಸ್ವಾಧೀನ ಹೊಂದಿದ್ದೇವೆ. ನಮಗೆ ಕಡಿಮೆ ಕ್ಷೇತ್ರ ಮಂಜೂರಾಗಿದೆ ಎಂದು ಮೇಲ್ಮನವಿ ಸಲ್ಲಿಸಿದ್ದು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ನಮಗೆ ಗ್ರಾಮ ಪಂಚಾಯಿತಿಯವರು ತೊಂದರೆ ನೀಡಿದ ಬಗ್ಗೆ ದೂರು ನೀಡಿರುವ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಸೈನಿಕ ಕೋಟಾದಡಿಯಲ್ಲಿ ಮಂಜೂರಾತಿ ಕೋರಿ ಸಲ್ಲಿಸಿರುವ ಅರ್ಜಿಯು ಈಗ ಇತ್ಯರ್ಥಕ್ಕೆ ಬಾಕಿ ಇದೆ. ಸೈನಿಕ ಕೋಟಾದಡಿಯಲ್ಲಿ ನಾನು ಜಮೀನನ್ನು ಮಂಜೂರಾತಿ ಕೋರಬೇಕಾದರೆ ಬಗರ್ ಹುಕುಂ ಸಾಗುವಳಿ ಪೂರ್ವದಲ್ಲಿ ಅರ್ಜಿಯನ್ನು ಕೊಡಬೇಕು ಎಂದರೆ ಸರಿಯಲ್ಲ. ಬಗರ್ ಹುಕುಂ ಸಾಗುವಳಿ ಜಮೀನನ್ನು ಸೈನಿಕ ಕೋಟಾದಡಿಯಲ್ಲಿ ಮಂಜೂರು ಮಾಡಲು ಕಾನೂನಿನ ಅಡಿಯಲ್ಲಿ ಮಂಜೂರು ಮಾಡಲು ಅವಕಾಶವಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಿಖರವಾದ ಗುರುತುಗಳಿಲ್ಲದ ಸಲ್ಲಿಸಿದ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದ ದಾವಾ ಸ್ವತ್ತುಗಳ ಶೆಡ್ಯೂಲ್ ತಪ್ಪಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 74 ನ್ನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಕೋರಿದ ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.